**<u>ಮಧ್ಯಂತರ ಅರ್ಜಿಯ ಮೇಲೆ ಆದ ಆದೇಶದ ಮೇರೆಗೆ ಸಾಕ್ಷಿಗೆ ದಿನಾಂಕ 25-01-2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಆರ್.ಆರ್.ಆರ್. ವಕೀಲರಿಂದ</u>**

ನಾನು 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಸ್ವಂತ ಊರು ರಾವೂರ ಗ್ರಾಮ ಆಗಿರುತ್ತದೆ ಎಂದರೆ ಸರಿ. ರಾವೂರ ಗ್ರಾಮದಲ್ಲಿ ನನ್ನ ತಂದೆ ಮನೆಯನ್ನು ಹೊಂದಿರುತ್ತಾನೆ ಎಂದರೆ ಸರಿ. ನಾನು ರಾವೂರ ಗ್ರಾಮದಲ್ಲಿ ಯಾವುದೇ ಜಮೀನುಗಳನ್ನು ನನ್ನ ಹೆಸರಿನಲ್ಲಿ ಹೊಂದಿರುವುದಿಲ್ಲ.

ನಾನು ಕೂಲಿಕೆಲಸ ಮಾಡುತ್ತಿದ್ದು, ಒಬ್ಬ ಗೌಂಡಿಯ ಕೈ ಕೆಳಗೆ ಕೆಲಸ ಮಾಡುತ್ತೇನೆ. ನಾನು ಎಲೆಕ್ಟ್ರಿಷಿಯನ್ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿದಿನ ರೂ. 1000/- ರಿಂದ 1500/-ರವರೆಗೆ ಆದಾಯ ಗಳಿಸುತ್ತೇನೆ ಎಂದರೆ ಸರಿಯಲ್ಲ.

ನಾನು ಪುಣೆಯಲ್ಲಿ ಕೆಲಸ ಮಾಡುತ್ತೇನೆ. ನಾನು ಪ್ರತಿವಾದಿಯನ್ನು ಮದುವೆಯಾದ ನಂತರ ಪುಣೆಗೆ ಕರೆದುಕೊಂಡು ಹೋಗಿರುತ್ತೇನೆ. ನಾನು ಮತ್ತು ಪ್ರತಿವಾದಿ ನನ್ನ ಅಕ್ಕನ ಜೊತೆಗೆ ವಾಸವಾಗಿದ್ದೇವು ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಅಕ್ಕ ಸಹ ಪ್ರತಿವಾದಿಗೆ ಮಾನಸಿಕ ಕಿರುಕುಳ ನೀಡುತ್ತಿದ್ದಳು ಎಂದರೆ ಸರಿಯಲ್ಲ. ನನ್ನ ಅಕ್ಕ ಫರಿದಾಬೇಗಂ ಇತಳು ಮದುವೆ ಸಂಧರ್ಭದಲ್ಲಿ ವರದಕ್ಷಿಣೆ ಹಣ ಮತ್ತು ಬಂಗಾರ ನೀಡಿರುವುದಿಲ್ಲ ಎಂದು ಪ್ರತಿವಾದಿಗೆ ಕಿರುಕುಳ ನೀಡುತ್ತಿದ್ದರು ಎಂದರೆ ಸರಿಯಲ್ಲ.

ನಂತರ ನಾನು ಮತ್ತು ನನ್ನ ಅಕ್ಕ ಪ್ರತಿವಾದಿಗೆ ಆಕೆಯ ತವರು ಮನೆಗೆ ಕಳುಹಿಸಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಪ್ರತಿವಾದಿಯೇ ತಾನೇ ಆಕೆಯ ತವರು ಮನೆಗೆ ಹೋಗಿದ್ದಳು ಎಂದು ನುಡಿಯುತ್ತಾರೆ. ಪ್ರತಿವಾದಿಯೇ ತಾನೇ ತನ್ನ ತವರು ಮನೆಗೆ ಹೋಗಿರುತ್ತಾಳೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ಮತ್ತು ಅಕೆಯ ಪಾಲಕರು ಸಾಕಷ್ಟು ಬಾರಿ ಪ್ರತಿವಾದಿಗೆ ಕರೆದುಕೊಂಡು ಹೋಗು ಎಂದು ನನಗೆ ಕರೆ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ವಿಷಯದ ಬಗ್ಗೆ ಸಾಕಷ್ಟು ಬಾರಿ ನ್ಯಾಯ ಪಂಚಾಯತಿ ಆಗಿರುತ್ತದೆ ಎಂದರೆ ಸರಿ. ಸದರಿ ಪಂಚಾಯತಿಯಲ್ಲಿ ಹಿರಿಯರು ಪ್ರತಿವಾದಿಗೆ ಕರೆದುಕೊಂಡು ಹೋಗುವಂತೆ ನನಗೆ ಬುದ್ದಿವಾದ ಹೇಳಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು, ನಾನು ಪ್ರತಿವಾದಿಗೆ ಕರೆದುಕೊಂಡು ಹೋಗಲು ತಯಾರಿದ್ದು, ಪ್ರತಿವಾದಿಯೇ ನನ್ನ ಜೊತೆ ಬರಲಿಲ್ಲ ಎಂದು ನುಡಿಯುತ್ತಾರೆ. ನಾನೇ ಪ್ರತಿವಾದಿಗೆ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯು ತನ್ನ ವಕೀಲರ ಮುಖಾಂತರ ನೋಟಿಸನ್ನು ನೀಡಿದ್ದಳು ಎಂದರೆ ಸರಿ. ಶಹಾಬಾದ ನ್ಯಾಯಾಲಯದಲ್ಲಿ ಪ್ರತಿವಾದಿಯು ದಾವಾ ನಂಃ 11/2018 ರ ಅಡಿಯಲ್ಲಿ ಒಂದು ದಾವೆಯನ್ನು ಸಲ್ಲಿಸಿದ್ದಳು ಎಂದರೆ ಸರಿ. ಸದರಿ ದಾವೆಯನ್ನು ಸಲ್ಲಿಸಿದ 2-3 ತಿಂಗಳ ನಂತರ ನಾನು ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ನೀಡಲು ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.